ಮಾತ್ರ ಅವುಗಳನ್ನು ರಂಗದ ಮೇಲೆ ತರಬಹುದು ಎಂದು ನಂಬಿದ್ದರು. ಜೇಮ್ಸ್ ಜಾಯ್ಸ್‌ನ ಪ್ರಸಿದ್ಧ 'ಯೂಲಿಸಿಸ್' ಕಾದಂಬರಿಯನ್ನು ಸಮಕಾಲೀನ ಕವಿ–ವಿಮರ್ಶಕ ಎಲಿಯಟ್ 'ಅದೊಂದು ವ್ಯರ್ಥ ಪ್ರಯೋಗ' ಎಂದು ತಿರಸ್ಕರಿಸಿದ್ದನು. ಇಂದು ವ್ಯಾನ್‌ಗೋನ ಪ್ರತಿಯೊಂದು ವರ್ಣಚಿತ್ರವೂ ಲಕ್ಷಗಟ್ಟಲೆ ಬೆಲೆಬಾಳುತ್ತಿದ್ದರೂ ಅವನು ಬದುಕಿದ್ದಾಗ ಒಂದೇ ಒಂದು ವರ್ಣಚಿತ್ರವೂ ಮಾರಾಟವಾಗಿರಲಿಲ್ಲ.

ಇನ್ನು ಕನ್ನಡ ಸಾಹಿತ್ಯಕ್ಕೆ ಬಂದರೆ, ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಅನಂತಮೂರ್ತಿಯವರ ಪ್ರತಿಕ್ರಿಯೆ, ಅನಂತಮೂರ್ತಿಯವರ 'ಸಂಸ್ಕಾರ' ಮತ್ತು 'ಭಾರತೀಪುರ' ಕಾದಂಬರಿಗಳಿಗೆ ಜಿ.ಎಸ್. ಆಮೂರ, ಶಾಂತಿನಾಥ ದೇಸಾಯಿ, ಗಿರಡ್ಡಿ ಗೋವಿಂದರಾಜ, ಮುಂತಾದವರ ಪ್ರತಿಕ್ರಿಯೆ –ಇತ್ಯಾದಿಗಳನ್ನು ಗಮನಿಸಿದರೆ, ವಿಮರ್ಶೆ ಇಷ್ಟು ಕಟುವಾಗಿರಬಹುದೆ ಎಂದು ಇಂದು ನಮಗೆ ಆಶ್ಚರ್ಯವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮಕಾಲೀನ ಗ್ರಹಿಕೆ–ವಿಮರ್ಶೆ ಹೆಚ್ಚಾಗಿ ಎರಡು ತುದಿಗಳಲ್ಲಿರುತ್ತವೆ – ಆರಾಧನಾಭಾವ ಅಥವಾ ತಿರಸ್ಕಾರ. ಸಮಕಾಲೀನ ಪ್ರತಿಭೆಯನ್ನು ವಸ್ತುನಿಷ್ಠವಾಗಿ ಗುರುತಿಸುವುದು, ಪ್ರಾಯಃ ಅಸಾಧ್ಯ.

**ಆ)** ಇನ್ನೂ ಮುಖ್ಯವಾದ ಅಂಶವೆಂದರೆ, 'ಶ್ರೇಷ್ಠ ಕೃತಿ', 'ಮೇಜರ್ ಕೃತಿ', 'ಕ್ಲಾಸಿಕ್' ಇತ್ಯಾದಿ ವರ್ಗೀಕರಣಗಳು ಸಂಪೂರ್ಣವಾಗಿ ಆಯಾ ಕಾಲಘಟ್ಟಗಳಲ್ಲಿ ಪ್ರಭಾವಿಯಾಗಿರುವ ಸಂಕಥನವನ್ನು ಆಧರಿಸಿರುತ್ತವೆ. ಎಂದರೆ, (ಫೂಕೋ ಮಂಡಿಸುವಂತೆ) ಪ್ರಭಾವಿ ವಿಶ್ವವಿದ್ಯಾಲಯಗಳ ವಿಭಾಗಗಳ ಪ್ರಾಧ್ಯಾಪಕರು, ಪ್ರಸಿದ್ಧ ಲೇಖಕರು, ಅಕಾಡೆಮಿಗಳು, ಪ್ರಮುಖ ನಿಯತಕಾಲಿಕೆಗಳು, ಇತ್ಯಾದಿ. 'ಸಾಹಿತ್ಯವೆಂದರೆ ಇದು, ಇದು ಸಾಹಿತ್ಯವಲ್ಲ', 'ಇಂತಿಂತಹ ಲಕ್ಷಣಗಳಿರುವ ಕೃತಿ ಮಾತ್ರ ಶ್ರೇಷ್ಠ' ಎಂದು ತೀರ್ಮಾನಿಸುವುದು ಹಾಗೂ ಇತರರನ್ನು ನಂಬಿಸುವುದು. 'ಒಂದು ನಾಗರಿಕತೆಯ ಪ್ರಬುದ್ಧತೆ, ಭಾಷೆಯ ಪ್ರಬುದ್ಧತೆ ಮತ್ತು ಸಾಹಿತಿಯ ಪ್ರಬುದ್ಧತೆ –ಇವು ಮೂರೂ ಒಟ್ಟಾಗಿ ಸೇರಿದರೆ ಮಾತ್ರ ಒಂದು 'ಕ್ಲಾಸಿಕ್' ಅಸ್ತಿತ್ವಕ್ಕೆ ಬರುತ್ತದೆ' ಎಂದು 'ವಾಟ್ ಈಜ್ ಅ ಕ್ಲಾಸಿಕ್' ಎಂಬ ಲೇಖನದಲ್ಲಿ ಎಲಿಯಟ್ ಹೇಳುವುದನ್ನು ಇಂದು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ – ಈ ಹೇಳಿಕೆಯ ಪ್ರತಿಯೊಂದು ಗುಣವೂ ಅಮೂರ್ತವಾಗಿರುವ ಕಾರಣದಿಂದ. ಹಾಗೆಯೇ, ಅವನು ಈ ಲೇಖನದಲ್ಲಿ ಬಹುವಾಗಿ ಮೆಚ್ಚುವ ವರ್ಜಿಲ್‌ನ ಈನಿಯಡ್ ಇಂದು ವಸಾಹತುಶಾಹಿಯ ವೈಭವೀಕರಣ ಎಂದು ಕಾಣುತ್ತದೆ.

> ಸಾಹಿತ್ಯಕ್ಕೂ ಸಮಾಜಕ್ಕೂ ಘನಿಷ್ಠ ಸಂಬಂಧವಿದೆ ಎಂದು ನಂಬಿದರೆ, ಸಾಹಿತ್ಯವನ್ನು ಬೆಳೆಸುವುದು ಹಾಗೂ ಪ್ರೋತ್ಸಾಹಿಸುವುದು ಒಟ್ಟಾರೆ ಸಮಾಜದ ಜವಾಬ್ದಾರಿ.

ಈ ಚರ್ಚೆಯ ಹಿನ್ನೆಲೆಯಲ್ಲಿ ನೋಡಿದಾಗ, ನಾವು ವ್ಯಾಖ್ಯಾನ–ವಿಮರ್ಶನ ಕಾರ್ಯಗಳಲ್ಲಿ 'ಮೇಜರ್ / ಮೈನರ್ ಕೃತಿ', 'ಯುಗದ ಕವಿ/ ಕೃತಿ', 'ಕ್ಲಾಸಿಕ್' ಇತ್ಯಾದಿ ಗುಣವಾಚಕಗಳನ್ನು ಬಳಸದೇ ಇರುವುದು ಒಳ್ಳೆಯದು; ಕಾರಣ ಇಂತಹ ವರ್ಗೀಕರಣ ಯಾವಾಗಲೂ ಸಾಪೇಕ್ಷವಾಗಿರುತ್ತದೆ.

ಇನ್ನು, ಜ್ಞಾನಪೀಠ/ಸರಸ್ವತಿಸಮ್ಮಾನ್ ಇತ್ಯಾದಿ ಪ್ರಶಸ್ತಿ ವಿಜೇತ ಲೇಖಕರನ್ನು ಹೊರತುಪಡಿಸಿಯೂ ಕಳೆದ ಎರಡು ದಶಕಗಳಲ್ಲಿ ಪ್ರಕಟವಾದ ಕೆಲವು ಕನ್ನಡ ಕೃತಿಗಳು ಹೀಗಿವೆ: ನಾಟಕಗಳು: ಶಿವಪ್ರಕಾಶ್ ಅವರ 'ಮಾದಾರಿ ಮಾದಯ್ಯ', ಕೆ.ವಿ. ಅಕ್ಷರ ಅವರ 'ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ'. ಕಾದಂಬರಿಗಳು: ರೇಖಾ ಕಾಖಂಡಕಿ ಅವರ 'ವೈವಸ್ವತ', ಮೊಗಸಾಲೆಯವರ 'ಮುಖವಾಡ', ವಿವೇಕ ಶಾನಭಾಗರ 'ಘಾಚರ್ ಘೋಚರ್', ಕುಂವೀ ಅವರ 'ಅರಮನೆ', 'ಜೈ